# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 347

ಸದಸ್ಯರ ಹೆಸರು : ಶ್ರೀ ಐವನ್ ಡಿ ಸೋಜಾ

ಉತ್ತರಿಸುವ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು

ಉತ್ತರಿಸುವ ದಿನಾಂಕ : 13.08.2025

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ಮಂಗಳೂರು ನಗರದ ಬಿಜೈಯಲ್ಲಿ 1987ರಲ್ಲಿ ನಿರ್ಮಾಣಗೊಂಡಿರುವ ಕೆ.ಎಸ್.ಆರ್.ಟಿ.ಸಿ ಬಸ್ಸು ನಿಲ್ದಾಣವನ್ನು ಬೆಳೆಯುತ್ತಿರುವ ನಗರಕ್ಕೆ ಸ್ಥಳಾವಕಾಶ ಮತ್ತು ಆರ್ಥಿಕವಾಗಿ ಹೆಚ್ಚು ಉಪಯುಕ್ತವಾಗುವಂತೆ ಅಧುನೀಕರಣಗೊಳಿಸಿ ಯಾವಾಗ ಕಾರ್ಯಗತಗೊಳಿಸಲಾಗುವುದು; | ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ವ್ಯಾಪ್ತಿಯ ಮಂಗಳೂರು ನಗರದ ಬಿಜೈಯಲ್ಲಿರುವ ನಿಗಮದ ಬಸ್ ನಿಲ್ದಾಣವನ್ನು ಆಧುನೀಕರಣಗೊಳಿಸುವ ಕುರಿತು ಪ್ರಸ್ತಾವನೆ ಪ್ರಸ್ತುತ ಇರುವುದಿಲ್ಲ. |
| ಆ. | ಪ್ರಸ್ತುತ ಇರುವ ನಿಲ್ದಾಣವು ನಗರದ ಹೃದಯ ಭಾಗದಲ್ಲಿದ್ದು, 6.50 ಎಕರೆ ಸ್ಥಳವು ವಾಣಿಜ್ಯ ಕಟ್ಟಡ ಮತ್ತು ಇತರ ಮೂಲಗಳಿಂದ ಆದಾಯ ಗಳಿಸಲು ಸಾರ್ವಜನಿಕ ಸಹಭಾಗಿತ್ವದಲ್ಲಿ ಸಾರ್ವಜನಿಕರಿಗೆ ಹೆಚ್ಚಿನ ಸವಲತ್ತುಗಳನ್ನು ನೀಡಲು ಸಾಧ್ಯವಾಗಲು ಸ್ಮಾರ್ಟ್ ಸಿಟಿಗೆ ಹೆಚ್ಚು ಒತ್ತು ನೀಡಲು ಇಲಾಖೆ ಕ್ರಮ ಕೈಗೊಳ್ಳುವುದೇ; | |
| ಇ. | ಮಂಗಳೂರು ಕೆ.ಎಸ್.ಆರ್.ಟಿ.ಸಿ ವಿಭಾಗಕ್ಕೆ ವಿದ್ಯುತ್ ಚಾಲಿತ ಬಸ್ಸುಗಳನ್ನು ನೀಡಲು ಇಲಾಖೆ ಕ್ರಮ ಕೈಗೊಳ್ಳುವುದೇ; ರಾಜ್ಯದಲ್ಲಿ ಸಂಚರಿಸುವ ವಿದ್ಯುತ್ ಚಾಲಿತ ಬಸ್ಸುಗಳು ಎಷ್ಟು. | PM e-bus sewa ಯೋಜನೆಯ ಅಡಿಯಲ್ಲಿ ಮಂಗಳೂರು ವಿಭಾಗಕ್ಕೆ ಒಟ್ಟು 100 ವಿದ್ಯುತ್ ಚಾಲಿತ ಬಸ್‌ಗಳನ್ನು ಕಾರ್ಯಾಚರಣೆ ಗೊಳಿಸಲು ಉದ್ದೇಶಿಸಲಾಗಿದೆ.<br><br>ಪ್ರಸ್ತುತ ರಾಜ್ಯದ ಸಾರಿಗೆ ಸಂಸ್ಥೆ/ನಿಗಮಗಳಲ್ಲಿ ಈ ಕೆಳಕಂಡಂತೆ ವಿದ್ಯುತ್ ಚಾಲಿತ ಬಸ್ಸುಗಳನ್ನು ಜಿ.ಸಿ.ಸಿ ಮಾದರಿಯಲ್ಲಿ ವಿವಿಧ ಮಾರ್ಗಗಳಲ್ಲಿ ಕಾರ್ಯಾಚರಣೆ ಮಾಡಲಾಗುತ್ತಿದೆ: |

| ಸಂಸ್ಥೆ/ನಿಗಮ | ಬಸ್‌ಗಳ ಸಂಖ್ಯೆ |
|---|---|
| ಕ.ರಾ.ರ.ಸಾ.ನಿಗಮ | 50 |
| ಬೆಂ.ಮ.ಸಾ.ಸಂಸ್ಥೆ | 1517 |
| ವಾ.ಕ.ರ.ಸಾ.ಸಂಸ್ಥೆ | - |
| ಕ.ಕ.ರ.ಸಾ.ನಿಗಮ | - |
| **ಒಟ್ಟು** | **1567** |

| | | |
|---|---|---|
| ಈ. | ಈ ವಿಭಾಗಕ್ಕೆ ಕೇಂದ್ರದ ಯೋಜನೆ ಅನ್ವಯ ಎಷ್ಟು ವಿದ್ಯುತ್ ಚಾಲಿತ ಬಸ್ಸುಗಳನ್ನು ನೀಡಲಾಗುವುದು; (ವಿವರ ನೀಡುವುದು) | ಭಾರತ ಸರ್ಕಾರದ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯವು (MoHUA) 'PM-eBus Sewa' ಯೋಜನೆಯನ್ನು ಕೈಗೆತ್ತಿಕೊಂಡಿರುತ್ತದೆ. ಭಾರತ ಸರ್ಕಾರವು ಸದರಿ ಇ-ಬಸ್ ಕಾರ್ಯಾಚರಣೆಗೆ MoHUA ಮೂಲಕ CESL (Convergence Energy Services Ltd.,) ರವರು ಒಟ್ಟು ವೆಚ್ಚದ ಒಪ್ಪಂದ (GCC-wet lease)- ಮಾದರಿಯ ಮೇಲೆ ಕೇಂದ್ರ ಸರ್ಕಾರವೇ ಟೆಂಡರ್ ಪ್ರಕ್ರಿಯೆ ನಡೆಸುತ್ತದೆ.<br><br>ಸದರಿ PM e-bus sewa ಯೋಜನೆಯಡಿಯಲ್ಲಿ ಆಯ್ಕೆಯಾದ ಕರ್ನಾಟಕ ರಾಜ್ಯದ 10 ನಗರಗಳಿಗೆ ಒಟ್ಟು 750 ಸಂಖ್ಯೆ ವಿದ್ಯುತ್ ಚಾಲಿತ ಬಸ್ಸುಗಳನ್ನು ಜಿಸಿಸಿ (Gross Cost Contract) ಆಧಾರದ ಮೇಲೆ ಒದಗಿಸಲು ಕೇಂದ್ರ ಸರ್ಕಾರವು ಅನುಮೋದನೆ ನೀಡಿರುತ್ತದೆ. ಅದರಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಕ್ಕೆ 350 ವಿದ್ಯುತ್ ಚಾಲಿತ ಬಸ್‌ಗಳು ಹಂಚಿಕೆಯಾಗಿದ್ದು, ಆ ಪೈಕಿ ಮಂಗಳೂರು ವಿಭಾಗಕ್ಕೆ 100 ಸಂಖ್ಯೆಯ 12ಮೀಟರ್ ಮಾದರಿಯ ವಿದ್ಯುತ್ ಚಾಲಿತ ಬಸ್‌ಗಳು ಹಂಚಿಕೆಯಾಗಿರುತ್ತವೆ. ಅದರಂತೆ, ಸದರಿ ಯೋಜನೆಯಡಿ ಟೆಂಡರ್‌ನಲ್ಲಿ L-1ಆಗಿ ಆಯ್ಕೆಯಾಗುವ ಬಿಡ್ಡುದಾರರೇ ವಿದ್ಯುತ್ ಚಾಲಿತ ಬಸ್ಸಳಿಗೆ ಚಾಲಕರ ಸೇವೆ, ನಿರ್ವಹಣೆ ಹಾಗೂ ಬಸ್ಸುಗಳನ್ನು ಚಾರ್ಜಿಂಗ್‌ಗೊಳಿಸಲು ತಗಲುವ ವಿದ್ಯುತ್ ವೆಚ್ಚವನ್ನು ಸಹ ಪಾವತಿಸುತ್ತಾರೆ. ಆದರೆ, ಸದರಿ ವಿದ್ಯುತ್ ಚಾಲಿತ ಬಸ್ಸುಗಳಿಗೆ ನಿರ್ವಾಹಕರನ್ನು ಸಾರಿಗೆ ನಿಗಮವು ಒದಗಿಸಬೇಕಾಗುತ್ತದೆ.<br><br>ಮುಂದುವರೆದು, ಟೆಂಡರ್‌ನಲ್ಲಿ ಬಿಡ್ಡುದಾರರು Standard ಬಸ್ಸುಗಳಿಗೆ ಸಂಬಂಧಿಸಿದಂತೆ ಬಿಡ್ಡಲ್ಲಿ ಪ್ರತಿ ಕಿ.ಮೀ.ಗೆ ನಮೂದಿಸುವ ದರದಲ್ಲಿ ಕೇಂದ್ರ ಸರ್ಕಾರವು ಪ್ರತಿ ಕಿ.ಮೀ.ಗೆ ರೂ.24/-ರಷ್ಟು CA (Central Assistance) ಮಾದರಿಯಲ್ಲಿ ನೀಡಲಿದ್ದು ಉಳಿದ ವ್ಯತ್ಯಾಸದ ಮೊತ್ತವನ್ನು ಸಂಬಂಧಪಟ್ಟ ಸಾರಿಗೆ ನಿಗಮವು ಭರಿಸಬೇಕಾಗಿರುತ್ತದೆ.<br><br>ಮುಂದುವರೆದು, ಸಿವಿಲ್ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಶೇ.60ರಷ್ಟು ಅನುದಾನವನ್ನು ಕೇಂದ್ರ ಸರ್ಕಾರ ಒದಗಿಸುತ್ತಿದ್ದು, ಉಳಿದ ಶೇ.40ರಷ್ಟು ಅನುದಾನವನ್ನು ಮಾತ್ರ ರಾಜ್ಯ ಸರ್ಕಾರ ಒದಗಿಸಬೇಕಾಗಿರುತ್ತದೆ. ಸದರಿ |
| ಉ. | ವಿದ್ಯುತ್ ಚಾಲಿತ ಬಸ್ಸುಗಳಿಗೆ ಕೆ.ಪಿ.ಟಿ.ಸಿ.ಎಲ್ ವಿದ್ಯುತ್ ಸಂಪರ್ಕವನ್ನು ನೀಡದೆ ವಿಳಂಬ ನೀತಿಯಿಂದ ವಿದ್ಯುತ್ ಚಾಲಿತ ಬಸ್ಸುಗಳನ್ನು ಓಡಿಸಲು ಹಿನ್ನಡೆಯಾಗಿದೆ ಎಂಬುದು ಸರಿಯೇ; ಹಾಗಿದ್ದಲ್ಲಿ ಈ ಬಗ್ಗೆ ಕೈಗೊಂಡ ಕ್ರಮವೇನು? (ವಿವರ ನೀಡುವುದು) | |

| | | |
|---|---|---|
| | | ಯೋಜನೆಯಡಿ ಎಲೆಕ್ಟ್ರಿಕ್ ಬಸ್ಸುಗಳಿಗೆ ಅವಶ್ಯವಿರುವ ಚಾರ್ಜಿಂಗ್ ಸ್ಟೇಷನ್ನಳನ್ನು ಸ್ಥಾಪಿಸಲು ಸಹ ಕೇಂದ್ರ ಸರ್ಕಾರವೇ ಟೆಂಡರ್ ಆಹ್ವಾನಿಸುತ್ತದೆ ಹಾಗೂ ಆಹ್ವಾನಿಸಲಾಗುವ ಟೆಂಡರ್ನಲ್ಲಿ ವಿಧಿಸಬಹುದಾದ ಷರತ್ತು ಮತ್ತು ನಿಬಂಧನೆಗಳಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದಿಂದ ಅಭಿಪ್ರಾಯ ಪಡೆದು ಸೂಕ್ತವಾದವುಗಳನ್ನು ಅಳವಡಿಸಿಕೊಂಡು ಕೇಂದ್ರ ಸರ್ಕಾರವೇ ಷರತ್ತು ಮತ್ತು ನಿಬಂಧನೆಗಳನ್ನು ಹೊರಡಿಸುತ್ತದೆ.<br><br>ಭಾರತ ಸರ್ಕಾರವು ಹಣ ಪಾವತಿ ವಿಳಂಬದ ಸಂಭಾವ್ಯ ಅಪಾಯಗಳನ್ನು ಪರಿಹರಿಸಲು ಹಾಗೂ OEM/ ಆಚರಣೆದಾರರ Financial Viability ಅನ್ನು ಹೆಚ್ಚಿಸಲು, ಸಾರ್ವಜನಿಕ ಸಾರಿಗೆ ಸಂಸ್ಥೆಗಳಿಗೆ ಎಲೆಕ್ಟ್ರಿಕ್ ಬಸ್ಸಳ ಖರೀದಿ ಮತ್ತು ಕಾರ್ಯಾಚರಣೆಗಾಗಿ Payment Security Mechanism ವ್ಯವಸ್ಥೆಯನ್ನು ರೂಪಿಸಿದ್ದು, ಸದರಿ ವ್ಯವಸ್ಥೆಗೆ ರಾಜ್ಯ ಸರ್ಕಾರವು ಸಹ ಅನುಮೋದನೆ ನೀಡಿರುತ್ತದೆ.<br><br>ಅಲ್ಲದೇ, ಮಾರ್ಚ್ 2027ರವರೆಗೆ ಆಯ್ದ ನಗರಗಳಿಗೆ ವಿದ್ಯುತ್ ಮೂಲಸೌಕರ್ಯ ರಚನೆಗೆ 100%ರಷ್ಟು ನೆರವನ್ನು ಕೇಂದ್ರ ಸರ್ಕಾರ ಒದಗಿಸುತ್ತದೆ.<br><br>ಪ್ರಸ್ತುತ ಕೇಂದ್ರ ಸರ್ಕಾರದಿಂದ ಟೆಂಡರ್ ಆಹ್ವಾನಿಸುವ ಪ್ರಕ್ರಿಯೆ ಪ್ರಗತಿಯಲ್ಲಿರುವುದರಿಂದ ವಿಳಂಬ ನೀತಿಯಿಂದ ವಿದ್ಯುತ್ ಚಾಲಿತ ಬಸ್ಸುಗಳನ್ನು ಒಡಿಸುವ ಪ್ರಶ್ನೆ ಉದ್ಭವಿಸುವುದಿಲ್ಲ. |

ಸಂಖ್ಯೆ: ಟಿಡಿ 151 ಟಿಸಿಕ್ಯೂ 2025

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು